(SRI C. J. MUCKANNAPPA)

the pending applications were granted loans and that there was no pendency. He says now that there is pendency. May I know which answer is correct?

Sri MOHAMED ALI.—I want to make it clear. An amount of 58 lakhs and odd was made available from the Reserve Bank and all the pending applications were granted loans out of the amount the State Government got from the Reserve Bank.

ಶ್ರೀ ಕುಂದೂರು ರುದ್ರಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ 564 ಜನರಿಗೆ ಸಾಲಕೊಟ್ಟಿದೆ ಎಂದು ಹೇಳಿದ್ದೀರಿ. ಎಷ್ಟು ಕೈಗಾರಿಕೆಗಳಿಗೆ ಈ ಸಾಲ ಕೊಟ್ಟಿದ್ದೀರಿ?

Sri MOHAMED ALI.—Sir, that is a very specific question.

ಶ್ರೀ ಕುಂದೂರು ರುದ್ರಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ 564 ಜನರಿಗೆ ಸಾಲ ಕೊಟ್ಟಿದ್ದೇವೆಂದು ಹೇಳುತ್ತೀರಿ. ಎಷ್ಟು ಕೈಗಾರಿಕೆಗಳಿಗೆ ಈ ಸಾಲವನ್ನು ಕೊಟ್ಟಿದೆ ಎಂದು ಹೇಳುವುದಕ್ಕಾಗುವುದಿಲ್ಲವೇ?

(ಉತ್ತರವಿಲ್ಲ).

ಶ್ರೀ ಕುಂದೂರು ರುದ್ರಪ್ಪ.—564 ಜನರಿಗೆ ಕೈಗಾರಿಕೆಗಳಿಗಾಗಿ ಸಾಲ ಕೊಟ್ಟಿದ್ದೀರಿ. ಇವುಗಳ ಪೈಕಿ ಕೇವಲ 264 ಜನ ಕೂಡ ಕೈಗಾರಿಕೆಯ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳುತ್ತೇನೆ. ಹೀಗೆ ನಡೆಯುತ್ತಿಲ್ಲವೆಂಬುದು ಸರ್ಕಾರದವರಿಗೆ ಗೊತ್ತಿದೆಯೇ?

ಅಧ್ಯಕ್ಷರು.—ಎಷ್ಟು ಜನಕ್ಕೆ ಕೈಗಾರಿಕೆಗಳಿಗಾಗಿ ಸಾಲ ಕೊಟ್ಟಿದೆ, ಎಷ್ಟು ಜನರಿಗೆ ಕೊಟ್ಟಿಲ್ಲ ಎಂಬ ಪ್ರಶ್ನೆಗಳು ಈ ಸಂದರ್ಭದಲ್ಲಿ ಬರುತ್ತವೆ. ಬೇರೆ ಪ್ರಶ್ನೆಗಳು ಮೂಲಪ್ರಶ್ನೆಯಿಂದ ಉಂಟಾಗುವುದಿಲ್ಲ.

1-30 P.M.

ಶ್ರೀ ಕುಂದೂರು ರುದ್ರಪ್ಪ.—ಈ ಸಾಲವನ್ನು ಏತಕ್ಕಾಗಿ ಕೊಟ್ಟಿದ್ದಾರೆಂದು ಹೇಳುತ್ತಾರೆಯೇ?

Sri MOHAMED ALI.—For Industries.

ಶ್ರೀ ಟಿ. ಹನುಮಯ್ಯ.—ಇದರಲ್ಲಿ ನಿಮ್ಮವರ್ಗದವರಿಗೆ ಸಂಬಂಧಪಟ್ಟಂಥ ಯಾವ ಯಾವ ಕೈಗಾರಿಕೆಗಳಿಗೆ ಎಷ್ಟೆಷ್ಟು ದುಡ್ಡು ಕೊಟ್ಟಿದ್ದಾರೆ?

Sri MOHAMED ALI.—I want notice.

ಶ್ರೀ ಟಿ. ಹನುಮಯ್ಯ.—ಹೋರಿಗಳನ್ನು ಸಾಕುವುದು, ಎಮ್ಮೆಗಳನ್ನು ಸಾಕುವುದು, ಕೋಳಿಗಳನ್ನು ಸಾಕುವುದು ಮುಂತಾದುವೆಲ್ಲ ಕೈಗಾರಿಕೆಗಳು ಎಂದು ಸರ್ಕಾರದವರು ತಿಳಿದುಕೊಂಡಿದ್ದಾರೆಯೇ?

Sri MOHAMED ALI.—Under the Rural Industrialisation Scheme, Agriculture and allied industries, livestock industries and other cottage and small-scale industries were considered to be industries, but now recently Government has taken a decision to restrict the loan assistance to cottage and small industries.

ಶ್ರೀ ಜಿ. ಎನ್. ಪುಟ್ಟಣ್ಣ.—ತುಮಕೂರು ಮತ್ತು ತುರುವೇಕೆರೆ ತಾಲ್ಲೂಕುಗಳಲ್ಲಿ ಹರಿಜನರಿಗೆ ಸಾಲ ಮಂಜೂರಾಗಿದ್ದುದರಲ್ಲಿ ಅವರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಗೆ ಅಡ್ಜಸ್ಟ್‌ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Mr. SPEAKER.—That does not arise.

Sri G. N. PUTTANNA.—Are the Government aware that the loan sanctioned is misused, if not utilised for purposes other than the purpose for which it was sanctioned?

Sri MOHAMED ALI.—If the Hon'able Member brings to the notice of the Government any case of such misuse we will take all necessary action.

Forms printed in Kannada in S. T. Depot, Belgaum.

Q.—1365. Sri N. O. SAMAJI (Belgaum II).—

Will the Government be pleased to state:—

(*a*) the number of Marathi and Kannada speaking staff working in the S.T. Depot, Belgaum;

(*b*) whether they are aware that before 1st April 1957, the Ticket Registration Forms and 'Way Bill T Six Forms' were printed in both Marathi and Kannada languages;

(*c*) whether they are aware that the above forms are issued only in the Kannada language since 1st April 1957; and if so, the reasons for such change;

(*d*) whether they are aware that much inconvenience is caused to the Marathi speaking people of this area in filling the said forms?

A.—Sri C. M. POONACHA (Minister for Home Affairs and Industries).—

(*a*) 133 Marathi.
98 Kannada.

(*b*) Yes.

(*c*) No.

(*d*) Does not arise in view of reply to (*c*) above.

[Sri N. O. SAMAJI *put his supplementary in Marathi.*]

*Sri C. M. POONACHA.—I don't have figures to indicate the number of Marathi speaking and Kannada speaking

V-31N58
N058-4-18-20
(B) 4750

employees in that region prior to 1st November 1950. At the time when the question was put, we made enquiries and these are figuers that we have furnished in the answers.

[Sri N. O. SAMAJI *put his supplementary in Marathi.*]

Mr. SPEAKER—To part (*c*) of the question whether they are aware that the above forms are issued only in Kannada language, the reply is 'No.' That means that they are not only issued in the Kannada language but also in Marathi.

[Sri L. B. BIRJE *put his supplementary in Marathi.*]

ಶ್ರೀ ಸಿ. ಎಂ. ಪೂಣಚ್ಚ.—ಈಗಲೂ ಕೂಡ ಮರಾಠಿ ಮತ್ತು ಕನ್ನಡ ಈ ಎರಡು ಭಾಷೆಗಳಲ್ಲಿಯೂ ಫಾರಂಗಳನ್ನು ಅಚ್ಚುಮಾಡುತ್ತೇವೆ. ಒಂದು ಸಮಯದಲ್ಲಿ ಕನ್ನಡಫಾರಂಗಳು ಮುಗಿದು ಹೋದುದರಿಂದ ಕನ್ನಡ ಫಾರಂಗಳಷ್ಟನ್ನೇ ಅಚ್ಚು ಮಾಡಿಸಲಾಯಿತು. ಮತ್ತೊಂದು ಸಲ ಮರಾಠಿಭಾಷೆಯ ಫಾರಂಗಳು ಮುಗಿದು ಹೋದುದರಿಂದ ಆಗ ಮರಾಠಿಫಾರಂಗಳನ್ನೇ ಅಚ್ಚು ಮಾಡಿಸಲಾಯಿತು. ಹೀಗೆ ಎರಡು ಭಾಷೆಗಳಲ್ಲಿಯೂ ಅಚ್ಚು ಹಾಕಿಸಿ ಉಪಯೋಗಿಸುತ್ತಿದ್ದೇವೆ. ಒಂದೊಂದು ಸಮಯದಲ್ಲಿ ಫಾರಂಗಳು ಮುಗಿದುಹೋಗಿ ಅಂಥ ಸಂಭವ ಬರಬಹುದು.

[Sri N. O. SAMAJI *put his supplementary in Marathi.*]

Mr. SPEAKER.—I think Sri M. P. Patil can explain.

Sri M. P. PATIL.—Mr. Sunthankar can explain to his friend.

Sri C. J. MUCKANNAPPA.—I rise to a point of order. The Speaker requested the Minister to answer him in Marathi, but he refused.....

Mr. SPEAKER.—He has not refused. There is no point of order. There is no impropriety involved.

[Sri N. O. SAMAJI *put his supplementary in Marathi.*]

Sri C. M. POONACHA.—Forms are always made available in both the languages.

[Sri N. O. SAMAJI *put his supplementary in Marathi.*]

[Sri M. P. PATIL *answered in Marathi.*]

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಪ್ರಶ್ನೆಯನ್ನು ಹಾಕಿರುವುದು ಇಂಗ್ಲೀಷಿನಲ್ಲಿ, ಅದಕ್ಕೆ ಉತ್ತರ ಕೊಟ್ಟಿರುವುದು ಇಂಗ್ಲೀಷಿನಲ್ಲಿ. ಶ್ರೀ ಸಾಮಜಿಯವರು ಉಪ ಪ್ರಶ್ನೆಗಳನ್ನು ಹಾಕುತ್ತಿರುವುದು ಮರಾಠಿಯಲ್ಲಿ. ಉತ್ತರ ಯಾವ ಭಾಷೆಯಲ್ಲಿ ಬರುತ್ತದೆಯೋ, ಪ್ರಶ್ನೆಯೂ ಅದೇ ಭಾಷೆಯಲ್ಲಿ ಬಂದರೆ ಅನುಕೂಲ.

ಅಧ್ಯಕ್ಷರು.—ನಮ್ಮನೆ ಹಾಗೆ ಮಾತನಾಡಿದರೆ ಒಳ್ಳೆಯದಲ್ಲ. ಪ್ರಶ್ನೆಯನ್ನು ಕಳಿಸಿರುವುದು ಮರಾಠಿಯಲ್ಲಿ. ಅದನ್ನು ಇಂಗ್ಲೀಷಿಗೆ ಭಾಷಾಂತರ ಮಾಡಿದೆ. ಆದ್ದರಿಂದ ಅವರು ಮರಾಠಿಯಲ್ಲಿ ಪ್ರಶ್ನೆ ಕೇಳುತ್ತಿದ್ದಾರೆ, ಅವರಿಗೆ ತಿಳಿಯಲಿ ಎಂದು ಮರಾಠಿಯಲ್ಲಿ ಉತ್ತರವನ್ನು ಕೊಡುತ್ತಿದ್ದಾರೆ.

ಶ್ರೀ ಟಿ. ಹನುಮಯ್ಯ.—ಮರಾಠಿ ಬರತಕ್ಕಂಥ ಜನಗಳ ಸಂಖ್ಯೆ ಶೇಕಡ ಎಷ್ಟಿದೆ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

Mr. SPEAKER.—Q. No. 1489: That question is over.

Investment on Bhadravati Iron and Steel Factory by the State and Central Governments.

Q.—1495. Sri S. R. RAMAIAH (Hoskote).—

Will the Government be pleased to state:—

(*a*) the amount invested by the State Government and the Government of India on the Iron and Steel Factory, Bhadravathi;

(*b*) the annual net income received by them during the last five years?

A.—Sri C. M. POONACHA (Minister for Home Affairs and Industries).—

(*a*) the amount invested by the Government of Mysore is Rs. 636·19 lakhs as on 1st April 1957. The Government of India have not invested any amount in the Works.

			Rs.
(*b*)	1952–53	...	33,45,366
	1953–54	...	45,83,572
	1954–55	...	52,68,220
	1955–56	...	71,88,399
	1956–57	...	61.00 lakhs (Provisional)

ಶ್ರೀ ಎಸ್. ಆರ್. ರಾಮಯ್ಯ.—ಈ ಕಾರ್ಖಾನೆಗೆ 6 ಕೋಟಿ ರೂಪಾಯಿ ಬಿಲ್ಲರೆ ಬಂಡವಾಳ ಹಾಕಿದೆ ಎಂದು ಉತ್ತರ ಕೊಟ್ಟಿದೆ. ಈ ಬಂಡವಾಳ ಹಾಕಿದ್ದು ಯಾವಾಗ?

ಶ್ರೀ ಸಿ. ಎಂ. ಪೂಣಚ್ಚ.—ಈ ಕಾರ್ಖಾನೆಯಲ್ಲಿ ಸರ್ಕಾರ ಹಾಕಿರುವಂಥ ಬಂಡವಾಳ ಈ ಕಾರ್ಖಾನೆ ಪ್ರಾರಂಭವಾದಾಗಿನಿಂದ ಇಂದಿನವರೆಗೆ.

Dr. R. NAGAN GOWDA.—May I know, Sir, either in the First Five-Year Plan or the Second Five-Year Plan, whether any provision has been made by the Government for expending the output of this Factory?